ಸೆಮಿನಾರ್‌ಗೆ ಅಂತ ಬರೆದ ಪೇಪರ್ ವಿಸ್ತೃತಗೊಂಡು ಪುಸ್ತಕವಾಯ್ತು. ಶಂಬಾ, ಸಿಂಪಿ ಲಿಂಗಣ್ಣ, ಹಾಮಾನಾ ಇವರೆಲ್ಲ ಮೆಚ್ಚಿ ಬರೆದ ಪತ್ರಗಳು ಈಗಲೂ ನನ್ನ ಬಳಿ ಇವೆ. ಅದು ಈಗ ಮೂರನೇ ಮುದ್ರಣ ಕಂಡಿದೆ. ಮುಂದೆ ನಾನು ಪಿಎಚ್.ಡಿ. ಮಾಡೋಕೆ ಬನಾರಸ್‌ಗೆ ಹೋದೆ. ಅಲ್ಲಿ ನನ್ನ ಆಸಕ್ತಿ ಹೆಚ್ಚಿನ ಓದು, ತಿರುಗಾಟ, ಸಂಗೀತದ ಕಡೆ ತಿರುಗಿ, ನನ್ನ ಪಿಎಚ್.ಡಿಯನ್ನೇ ಕೈಬಿಟ್ಟೆ. ಆಮೇಲೆ ನನ್ನ ಉದ್ಯೋಗವೇ ಬೇರೆಯಾಗಿ ಅಕಡೆಮಿಕ್ಸ್ ನನ್ನಿಂದ ದೂರಾನೇ ಉಳೀತು.

◆ **ನಂತರ ಪ್ರಕಟವಾದ ನಿಮ್ಮ 'ನೀರು ಮತ್ತು ಪ್ರೀತಿ', ನಿಮಗೆ ಅಪಾರ ಜನಪ್ರಿಯತೆಯನ್ನ ತಂದುಕೊಟ್ಟ ಕೃತಿ...**

ಲಂಕೇಶ್ ಅವರು ತಮ್ಮ ಪತ್ರಿಕೆಯಲ್ಲಿ ಅದನ್ನು ಧಾರಾವಾಹಿಯಾಗಿ ಪ್ರಕಟಿಸಿದ್ದು ನನಗೆ ಯಾವಾಗಲೂ ಸಂತೋಷದ ಮತ್ತು ಹೆಮ್ಮೆಯ ಸಂಗತಿ.

◆ **ಅದರ ನಾಯಕಿ ಜಲಜಾ ನಿಜವಾದ ಅರ್ಥದಲ್ಲಿ ಹೊಸಹೆಣ್ಣು. ಹೊಸ ಹೆಣ್ಣಿನ ಬಗೆಗೆ ಕೇವಲ ಮಾತುಗಳನ್ನು ಆಡ್ತಾ ಇದ್ದಾಗ ಇವಳು ಅಂಥದ್ದೊಂದು ಬದುಕನ್ನೇ ಬದುಕಿಬಿಡುವ ಮೂಲಕ ಜನರಿಗೆ ಹತ್ತಿರವಾದಳು ಅನ್ನಬಹುದು. ತನ್ನದೇ ಸಂಕೋಚಗಳನ್ನ ಗಳಿಗೆ ಗಳಿಗೆಗೂ ಮೀರಿಕೊಳ್ಳುತ್ತಾ ಹೆಣ್ಣು ದಾಟಬೇಕಾದ ಸಾಗರವನ್ನೇ ಈಜಿದವಳಂತೆ ಜಲಜಾ ಕಾಣಿಸಿಕೊಳ್ಳುತ್ತಾಳೆ. ಸುಕನ್ಯಾ ಕನಾರಳ್ಳಿ ಇದರ ಅನುವಾದವನ್ನು ಇಂಗ್ಲಿಷಿಗೆ ಮಾಡಿ ಅದಕ್ಕೆ 'ಕುವೆಂಪು ಭಾಷಾ ಭಾರತಿ'ಯ ಪ್ರಶಸ್ತಿಯೂ ಬಂದಿದ್ದು, ಆ ಕೃತಿಗೆ ಸಂದ ನಿಜ ಮನ್ನಣೆ ಅಂತಲೇ ಹೇಳಬಹುದು.**

ಥ್ಯಾಂಕ್ಸ್ ಮೇಡಮ್.

◆ **'ಧ್ಯಾನ' ನಿಮ್ಮ ಕವಿತೆಗಳ ಸಂಕಲನ. ಕನ್ನಡದಲ್ಲಿ ನಿಮ್ಮನ್ನ ಕವಿಯಾಗಿ ಗುರುತಿಸಿಯೇ ಇಲ್ಲ; ಅದರಲ್ಲಿ ಕೆಲವು ಅತ್ಯುತ್ತಮ ಕವಿತೆಗಳಿದ್ದಾಗಲೂ... ಅಲ್ಲವೇ?**

ಒಂದೇ ಸಂಕಲನ ಅನ್ನೋದೂ ಒಂದು ಕಾರಣವಿದ್ದೀತು. ಆದರೆ ಇತ್ತೀಚೆಗೆ ಗೆಳೆಯ ಎಚ್. ಎಸ್. ಶಿವಪ್ರಕಾಶ್ ಅದರ ಮೇಲೆ ಒಂದು ಲೇಖನ ಬರೆದಿರೋದು ನನಗೆ ತುಂಬಾ ಸಂತೋಷ ಕೊಟ್ಟಿದೆ.

◆ **ಈ ಸಂಕಲನ ಬಾರದೇ ಇದ್ದಿದ್ದರೆ ಕನ್ನಡಕ್ಕೆ ಲುಕ್ಸಾನು ಆಗುತ್ತಿತ್ತು ಅನ್ನುವ ಮಾತನ್ನು ಅವರು ಹೇಳಿದ್ದಾರೆ.**

ಆ ಮಾತು ನನಗೆ ಕೊಟ್ಟ ಅಮೂಲ್ಯ ಪ್ರಶಸ್ತಿ ಅನ್ನಬೇಕು. ಲಂಕೇಶ್ ನನಗೆ ಕಥೆ ಬರಿ ಅಂದಾಗಲೆಲ್ಲ ನಾನು ಒಂದು ಪದ್ಯ ಬರೆದು ಕೊಟ್ಟುಬಿಡುತ್ತಿದ್ದೆ. ಒಮ್ಮೊಮ್ಮೆ ಲಂಕೇಶ್ ಪದ್ಯ ಬರೆಯೋದು ಸುಲಭಾ ಅಲ್ವಾ ಅಂತ ಛೇಡಿಸ್ತಾ ಇದ್ದದ್ದೂ ಇತ್ತು.

◆ **ಇತ್ತೀಚೆಗೆ ಬಂದ ನಿಮ್ಮ ಕೃತಿಗಳಲ್ಲಿ 'ನಾಡವರ್ಗಳ್' ಅನ್ನು ಜನ ಸಿಕ್ಕಾಪಟ್ಟೆ ಇಷ್ಟಪಟ್ಟಿದ್ದಾರೆ. ಒಬ್ಬರಂತೂ ಡಿವಿಜಿಯವರ 'ಜ್ಞಾಪಕ ಚಿತ್ರಶಾಲೆ' ನಂತರ ಬಂದ ಶ್ರೇಷ್ಠ ವ್ಯಕ್ತಿಚಿತ್ರ ಸಂಕಲನ ಅಂತಲೂ ಹೇಳ್ತಿದ್ದರು. ಅದರಲ್ಲಿ ಒಬ್ಬ ಮಹಿಳೆಯ ಬಗ್ಗೆಯೂ ನೀವು ಬರೆದಿಲ್ಲ ಅನ್ನುವ ಆರೋಪವೂ ಇದೆ. ನಿಮ್ಮ**

